**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ದೇವರೆಡ್ಡಿ** | **ದೋ.ಸಾ. 15** |
| **ತಂದೆಯ ಹೆಸರು** | **:** | **ಬಸವರಾಜ** | **ಪ್ರಾ.ಸಾ. 11** |
| **ವಯಸ್ಸು** | **:** | **45 ವರ್ಷ** | **ದಿನಾಂಕಃ 29-03-2025** |
| **ಉದ್ಯೋಗ** | **:** | **ಪ್ಯೂನ** | |
| **ವಾಸಸ್ಥಳ** | **:** | **ಚಿಂಚೋಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈಗ 10 ವರ್ಷಗಳಿಂದ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಜವಾನ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ.

ಪ್ರಾಸಾ 1 ರವರು ನನಗೆ ಗೊತ್ತು. ಚಾಸಾ 12 ರವರು ನನಗೆ ಗೊತ್ತು. ಪ್ರಾ ಸಾ 8 ರವರು ನನಗೆ ಗೊತ್ತು. ಪ್ರಾಸಾ 10 ರವರು ನನಗೆ ಗೊತ್ತು. ಆರೋಪಿ ನನಗೆ ಗೊತು. ಅವರು ತಾಲೂಕು ಪಂಚಾಯತಿಲ್ಲಿ ಮ್ಯಾನೇಜರ ಆಗಿ ಕಾರ್ಯನಿರ್ವಹಿಸಿದ್ದರು. ಆರೂಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಇಲ್ಲ ಎಂದು ತಿಳಿಸುತ್ತಾರೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ಅವರು ನನಗೆ ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

2014ನೇ ಸಾಲಿನಲ್ಲಿ ಚಿಂಚೋಳಿ ತಾಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಉಪಗೃಹ ತರಬೇತಿ ಶಾಖೆಯ ತರಬೇತಿ ಪ್ರಭಾರವನ್ನು ಆರೋಪಿ ಶಿವಶರಣಪ್ಪ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸದರಿ ತರಬೇತಿಗೆ ತಗಲುವ ಖರ್ಚು ವೆಚ್ಚಕ್ಕಾಗಿ ಪಂಚಾಯತಿಯಿಂದ ದಿನಾಂಕ 30-07-2014 ರಂದು ಕೃಷ್ಣಾ ಗ್ರಾಮೀಣ ಬ್ಯಾಂಕಿಗೆ ಸೇರಿದ 280996 ರ ರೂ.5,690/- ರ ಚೆಕ್ಕನ್ನು ತಾಲೂಕು ಪಂಚಾಯತಿ

ಕಾರ್ಯನಿರ್ವಾಹಕ ಅಧಿಕಾರಿ ಚಾಸಾ-1 ಮತ್ತು ಸಹಾಯಕ ಲೆಕ್ಕಾಧಿಕಾರಿಗಳಾದ ಚಾಸಾ-12 ರವರು ಜಂಟಿಯಾಗಿ ಸಹಿ ಮಾಡಿ ಆರೋಪಿಗೆ ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿದ ಆರೋಪಿ ರೂ.5,690/- ರೂಪಾಯಿ ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.45,690/- ಗಳಿಗೆ ಚೆಕ್ಕು ಕೊಟ್ಟಿರುವಂತೆ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲಿ ನಲವತ್ತೆದು ಸಾವಿರದ ಆರು ನೂರಾ ತೂಂಬತ್ತು ಎಂದು ಬರೆದುಕೊಂಡು ಸದರಿ ಚೆಕ್ಕನ್ನು ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಅದೇ ರೀತಿ ದಿನಾಂಕ 09-09-2014 ರಂದು ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿ ಇದ್ದ ಚೆಕ್ ನಂ.280997 ನ್ನು ತರಬೇತಿ ಖರ್ಚು ವೆಚ್ಚಕ್ಕಾಗಿ ತಗಲುವ ರೂ.6,150/- ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕನ್ನು ತಿದ್ದುಪಡಿ ಮಾಡಿ ಆರೋಪಿ, ರೂ.6,150/- ಎಂದು ಬರೆದಿರುವ ಕಡೆ 4 ಎಂಬ ಅಂಕಿಯನ್ನು ಸೇರಿಸಿ ಒಟ್ಟು ರೂ.46,150/- ಗಳಿಗೆ ಚೆಕ್ಕು ಕೊಟ್ಟಿರುವ ರೀತಿ ತಿದ್ದುಪಡಿ ಮಾಡಿ ಮತ್ತು ಅಕ್ಷರಗಳಲ್ಲೂ ನಲವತ್ತಾರು ಸಾವಿರದ ನೂರಾ ಐವತ್ತು ಎಂದು ತಿದ್ದುಪಡಿ ಮಾಡಿ ಸದರಿ ಚೆಕ್ಕನ್ನೂ ಸಹ ತನ್ನ ಸ್ವಂತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮೇಲೆ ಉಲ್ಲೇಖಿಸಲಾದ ಎರಡು ಬ್ಯಾಂಕ್ ಚೆಕ್ಕುಗಳನ್ನು ನಮ್ಮ ಪಂಚಾಯತಿ ಬ್ಯಾಂಕ್ ಖಾತೆ ನಂ.2059049568 ರಿಂದ ಆರೋಪಿಗೆ ತರಬೇತಿ ವೆಚ್ಚಕ್ಕಾಗಿ ತಲಾ ರೂ.5,690/- ಮತ್ತು ರೂ.6,150/- ರೂ.ಗಳಿಗೆ ಕೊಟ್ಟಿದ್ದು, ಸದರಿ ಚೆಕ್ಕುಗಳನ್ನು ಮೇಲೆ ಹೇಳಿದಂತೆ ತಿದ್ದುಪಡಿ ಮಾಡಿಕೊಂಡಿದ್ದ ಆರೋಪಿ ತನ್ನ ವಯಕ್ತಿಕ ಬ್ಯಾಂಕ್ ಖಾತೆ ಸಂಖ್ಯೆ 11059100009766 ಕ್ಕೆ ಜಮಾ ಮಾಡಿಕೊಂಡು ಹೆಚ್ಚುವರಿಯಾಗಿ ರೂ.80,000/- ಸರಕಾರಿ ಹಣವನ್ನು ಸರಕಾರಕ್ಕೆ ವಂಚಿಸಿ ತನ್ನ ಸ್ವಂತ ಖಾತೆಗೆ ಚೆಕ್ಕನ್ನು ನಕಲು ಮಾಡಿ ಜಮಾ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರಕಾರಕ್ಕೆ ಮೋಸ ಮಾಡುವ ಮಾಡುವ ಉದ್ದೇಶದಿಂದ ಆರೋಪಿ ಚಾಸಾ-1 ಮತ್ತು ಚಾಸಾ-12 ರವರ ಜಂಟಿ ಸಹಿಗಳು ಇದ್ದ ಚೆಕ್ಕುಗಳನ್ನು ತಿದ್ದುಪಡಿ ಮಾಡಿ ಸರಕಾರಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮೇಲ್ಕಂಡಂತೆ ಆರೋಪಿ ನಮ್ಮ ಇಲಾಖೆಗೆ ಮತ್ತು ಸರಕಾರಕ್ಕೆ ವಂಚಿಸಿರುವ ವಿಚಾರ 2015 ನೇ ಸಾಲಿನಲ್ಲಿ ನಮ್ಮ ಇಲಾಖೆಯ ಆಂತರಿಕ ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಬೆಳಕಿಗೆ ಬಂದಿದ್ದು ಈ ಸಂಬಂಧ ದಿನಾಂಕ 21-01-2015 ರಂದು ಚಾಸಾ-1 ರವರು ಚಿಂಚೋಳಿ ಪೋಲೀಸರಿಗೆ ಆರೋಪಿ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಿನಾಂಕ 05-06-2017 ರಂದು ಈ ಪ್ರಕರಣದ ಸಂಬಂಧ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು ಮತ್ತು ಸದರಿ ಸಂದರ್ಭದಲ್ಲಿ ಆರೋಪಿ ಚಾಸಾ-1 ಮತ್ತು 12ರವರ ಜಂಟಿ ಸಹಿಗಳಿದ್ದ

ಚೆಕ್ಕುಗಳನ್ನು ಮೋಸ ಮಾಡುವ ಉದ್ದೇಶದಿಂದ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸೇರಿದ ರೂ.80000/- ಹಣವನ್ನು ತನ್ನ ಸ್ವಂತಕ್ಕೆ ಬಳಸಿಕೊಂಡು ಸರ್ಕಾರಕ್ಕೆ ವಂಚಿಸಿದ್ದಾನೆ ಮತ್ತು ಸದರಿ ವಂಚನೆ ಕೃತ್ಯ ದಿನಾಂಕ 30-07-2014 ರಿಂದ 09-09-2014 ರ ಅವಧಿಯಲ್ಲಿ ಆಗಿತ್ತು ಎಂದು ನನಗೆ ಚಾಸಾ-13 ರವರಿಂದ ಗೊತ್ತಾಗಿರುತ್ತದೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎನ್ನುವುದು ಸರಿಯಲ್ಲ.

ಸಾಕ್ಷಿ ಕೊಟ್ಟಿದ್ದಾರೆ ಎನ್ನಲಾದ ಹೇಳಿಕೆಯನ್ನು ಈಗ ನಿಪಿ-25 ಎಂದು ಗುರುತಿಸಲಾಯಿತು.

ನಿಪಿ-25 ರಂತೆ ಹೇಳಿಕೆ ಕೊಟ್ಟಿದ್ದರು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಹೇಳಿಕೆ ಕೊಟ್ಟಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ವಾಟೀ ಸವಾಲುಃ ಆರೋಪಿತರ ಪರ ಶ್ರೀ JPA ವಕೀಲರಿಂದಃ**

ಚಾಸಾ 1 ಮತ್ತು ಚಾಸಾ 12 ರವರು ಜಾಣರಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಾಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವಿಲ್ಲದೇ ಯಾವುದೇ ಕೆಲಸ ಆಗುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೊಪಿ ಸಂಭಾವಿತ ಮನುಷ್ಯ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಯಾವುದೇ ತಪ್ಪು ಮಾಡುವ ವ್ಯಕ್ತಿ ಅಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**